ಸುಂಯ್ ಸುಂಯ್ ಜೀಕಿ
ಅಮ್ಮನಕ್ಕರೆ ಜೋಕಾಲಿ!
ಕಾರು ಬಂದರೆ ಬರಲಿ
ಏನೇ ಸ್ಪೀಡಲಿ ಇರಲಿ!

ಲೆಕ್ಕವಿಲ್ಲದೆ ಟೂ ವೀಲರ್‌ಗಳು
ಬರುತಲೆ ಇರಲಿ ಇರಲಿ

ಬಸ್ಸು ಬಂದರೆ ಬರಲಿ
ಲಾರಿಗಳೂ ಡರ್ರನಲಿ

ಪರಿವೆಯೆ ಇಲ್ಲವೆ
ಈ ಅರಗಳಿಗೆಗೆ ಹಾಯ್
ನಟ್ಟನಡುವಿನಲೆ ನಲಿದಿರಲಿ!

ಒಹೋಯ್ ಓಯ್ ಓಯ್
ಸ್ಕೂಲ್ ಬ್ಯಾಗನು ಸಳ್ಳನೆ ಇಳಿಸಿ
ಸೈಕಲ್ ಸವಾರಿಗೆ ಬ್ರೆಕ್ಕನು ಹಾಕಿ
ನಿಂತೇ ಬಿಡುವ ಪುಟ್ಟನ ಕಣ್ಣಿಗೆ
ಪುಳಕ್ಕನೆ ಅಹಾ ಕಣ್ಣನು ಹೊಡೆಯುತ
ಅಮ್ಮಾ ಎಚ್ಚರಗೊಳಲಿ!
ದಾರಿಯ ಬದಿಗೋಡಿರಲಿ!

ಸವಿ ಸವಿ ನೆನಪಿನ
ಡೈರಿಯ ಒಳಗೆ
ರಾತ್ರಿ ಹೊಸಾ ಎಂಟ್ರಿ ಇರಲಿ!





ಕಲೆ: ಸಂತೋಷ್ ಸಸಿಹಿತ್ಲು

# ಹೂ ಹೂ ಹೂ

ಹೂವಂದ್ರ ಹೂ
ಹತ್ತಿಹಾಂಗ ಪಕಳಿ ಇಟಗೊಂಡ
ಛತ್ರಿಹಾಂಗ ಗಿಡದಾಗ
ಹ್ಯಾಂಗರ ಮುದ್ಯಾಗಿ ಕೂತಿತ್ತಿದು
ಹರದು ಗಿರದು ಮಾಡಿದರ
ಚಾಳಿ ಗಡ್ಡಿ ಪೂ !

★★★

ಮಲಿಗಿ ಹೂ ಬಿದ್ದಾವ
ಮಾಟನ ಹೆಜ್ಜಿ ಮೂಡ್ಯಾವ
ಹೂ ಯಾರ ಹರದಾರ
ನಮ್ಮ ಕೈಯಾಗ ಸಿಗತಾರ!

★★★

ಈಗ ಹರದಿಟ್ಟೇಯೇನ
ಅಂಗಿ ಮ್ಯಾಲ ಹೂ
ಏನ ತೆಳ್ಳಗವ ನೋಡ
ಹಾರಸ್ತೀನಿ ಪೂ!

★★★

ಗುಡ್ಡ ಕಾಣವಲ್ಲದ
ಮುಳಗೇ ಹೋಗೇದ
ಬರೇ ನೀರ ನೀರ
ಗಿಡದ ಬುಡಕ ಅಯ್ಯ
ಕುರಿ ಹೆಂಗ ನಿಂತಾವ
ಸಣ್ಣ ಮರಿ ಎಲ್ಲೆವ ?
ಬ್ಯಾ ಬ್ಯಾ ಅಂತಾವ !